ದಿನಾಂಕಃ 11-07-2019

ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದಃ</u>

ನಾನು ದಾವೆಯನ್ನು ಖಾನೇಶು ನಂಬರ್ 31 ಆಸ್ತಿ ನಂ 30 ರ ಮೇಲೆ ಹಾಕಿದ್ದೇನೆ. ಪ್ರತಿವಾದಿ ಖರೀಂ ಸಾಬ್ ಅವರ ಮೇಲೆ ದಾವೆ ಹೂಡಿದ್ದೇನೆ ಎಂದರೆ ನಿಜ . ಪ್ರತಿವಾದಿಯವರಿಂದ ಆಸ್ತಿಯಿನ್ನು ಬಿಡಿಸಿಕೊಳ್ಳಲು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿ ಅಲ್ಲ . ಸಾಕ್ಷಿ ಮುಂದುವರೆದು ಪ್ರತಿವಾದಿಯವರ ಹೆಸರಿಗೆ ದಾವಾ ಆಸ್ತಿಯ ಖಾತಾ ಬದಲಾವಣೆ ಆದ ಕಾರಣ ನನ್ನ ಹೆಸರಿಗೆ ಖಾತಾ ಬದಲಾವಣೆಗಾಗಿ ದಾವೆ ಹೂಡಿರುತ್ತೇನೆ. ಪ್ರತಿವಾದಿಯವರು ಹಾಕಿರುವ ತಕರಾರನ್ನು ನಾನು ವಕೀಲರ ಮೂಲಕ ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿಯ ಖಾತೆ ಬದಲಾವಣೆ ಪ್ರತಿವಾದಿ ಯವರ ಹೆಸರಿಗೆ 1979 ರಲ್ಲಿ ಆಗಿರುತ್ತದೆ. 1979 ರಿಂದ ನಾನು ಪಂಚಾಯತಿ ಅಧಿಕಾರಿಗಳ ಮುಂದೆ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ ಸಾಕ್ಷಿ ಮುಂದುವರೆದು ನನಗೆ ಅದರ ಬಗ್ಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಖಾಯಂ ಆಗಿ ಭದ್ರಾವತಿಯಲ್ಲಿ ವಾಸವಾಗಿರುತ್ತೇನೆ. ನಾನು ಹುಟ್ಟಿನಿಂದಲೂ ಭಾಧ್ರಾವತಿಯಲ್ಲಿ ವಾಸವಾಗಿರುತ್ತೇನೆ. ನಾನು ವ್ಯವಸಾಯ ಮಾಡಿಕೊಂಡಿದ್ದೇನೆ. ನನಗೆ ಸೇರಿದ ಜಮೀನುಗಳು ಭದ್ರಾವತಿ ತಾಲ್ಲೂಕಿನಲ್ಲಿ ಇರುತ್ತವೆ. ನಮ್ಮ ತಂದೆ ಮರಣ ಹೊಂದಿರುತ್ತಾರೆ. ಅವರು ಮರಣ ಹೊಂದಿ 35 ವರುಷಗಳಾದವು. ದಾವಾ ಆಸ್ತಿಯು ನಮ್ಮ ಹೆಸರಿಗೆ 1954 ರಿಂದ 1977 ರ ವರೆಗೆ ಇರುತ್ತದೆ. ಸದರಿ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯನ್ನು ನಮ್ಮ ತಂದೆಯವರು 08.04.1954 ರಲ್ಲಿ ಕೊಂಡಿರುತ್ತಾರೆ. ಅಂದಿನಿಂದಲೂ ನಮ್ಮ ತಂದೆಯವರು ಹೊಸಕೇರಿ ಗ್ರಾಮದಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು ಹೋಗಿ ಬಂದು ಮಾಡುತ್ತಿದ್ದರು. ನಮ್ಮ ತಂದೆಯವರು ಹೊಸಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದರು. ನಮ್ಮ ತಂದೆಯವರು ಮತ್ತು ನಾನು ಎಂದಿಗೂ ಹೊಸಕೇರಿ (ಬಸವಾಪಟ್ಟಣ) ಗ್ರಾಮದಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿ .

ನಮ್ಮ ತಂದೆಯವರು ದಾವಾ ಆಸ್ತಿಯನ್ನು ಖರೀದಿ ಮಾಡಿದ ಮೂಲ ಕ್ರಯ ಪತ್ರ ಕಳೆದುಹೋಗಿರುತ್ತದೆ. ಸದರಿ ಕ್ರಯ ಪತ್ರವು ಕಳೆದು ಹೋಗಿ ಸುಮಾರು 20 ವರುಷಗಳಾಗಿರುತ್ತವೆ. ನಾನು ದಾಖಲೆ ಕಳೆದು ಹೋಗಿರುವ ಬಗ್ಗೆ ದೂರನ್ನು ದಾಖಲಿಸಿರುವುದಿಲ್ಲ. ದಾವಾ ಆಸ್ತಿಯ ಮೂಲ ಕ್ರಯ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಅದನ್ನು ನಿಡಿ.1 ಎಂದು ಗುರುತಿಸಲಾಯಿತು. ನಮ್ಮ ತಂದೆಯವರು 01 ನೇ ಪ್ರತಿವಾದಿಗೆ ಮಾರಾಟ ಮಾಡುವಾಗ ಕೊಟ್ಟಂತಹ ಮೂಲ ಕ್ರಯ ಪತ್ರ ಎಂದರೆ ಸರಿ ಅಲ್ಲ . ನಿಡಿ.01 ರ ಲ್ಲಿರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಡಿ.01 ಎ ಎಂದು ಗುರುತಿಸಲಾಯಿತು. ನಿಡಿ.01 ರ ಕ್ರಯ ಪತ್ರದ ನಂತರ ನನ್ನ ತಂದೆಯವರು 01 ನೇ ಪ್ರತಿವಾದಿಗೆ ಬರೆದುಕೊಟ್ಟ ಶುದ್ಧ ಕ್ರಯದ ಕರಾರು ಪತ್ರ ಅದರಲ್ಲಿರುವ ಸಹಿ ನನ್ನ ತಂದೆ ಹಾಗೂ 01 ನೇ ಪ್ರತಿವಾದಿಯವರ ಸಹಿ ಆದರೆ ಸಾಕ್ಷಿ ಮುಂದುವರೆದು ನಮ್ಮ ತಂದೆಯವರು ಸದರಿ ದಾಖಲೆಗೆ ಸಹಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ದೃಢೀಕೃತ 1979-80 ರ ಮ್ಯುಟೇಷನ್ ರಿಜಿಸ್ಟರ್ ನ್ನು ತೋರಿಸಲಾಗಿದ್ದು ಸಾಕ್ಷಿ ಅದು ಗ್ರಾಮ ಪಂಚಾಯತಿ ಕಾರ್ಯದರ್ಶಿಯವರು ನೀಡಿರುವ ಪ್ರತಿ ಆದರೆ ಅದು ಸೃಷ್ಟಿಸಿಕೊಂಡಿರುವ ದಾಖಲೆ ಎಂದು ನುಡಿಯುತ್ತಾರೆ. ದಾವಾ ಹೂಡುವ ಮೊದಲು ಪ್ರತಿವಾದಿಗಳಿಗೆ ನಾನು ನೋಟೀಸ್ ಕೊಟ್ಟಿರುವುದಿಲ್ಲ.

ನಿಪಿ.01 ನ್ನು ನಾನು ನೋಡಿರುತ್ತೇನೆ. ನಮ್ಮ ತಂದೆಯವರು ಖರೀದಿಸಿದ ಕಾಲದಲ್ಲಿ ಸದರಿ ಆಸ್ತಿಯಲ್ಲಿ 03 ಅಂಕಣದ ಮನೆ ಮತ್ತು ಹಿತ್ತಲು ಇತ್ತು ಎಂದು ನುಡಿಯುತ್ತಾರೆ. ದಾವಾ ಹೂಡುವ ಕಾಲಕ್ಕೆ ಸದರಿ ಆಸ್ತಿಯಲ್ಲಿ 03 ಅಂಕಣದ ಮನೆ ಮತ್ತು ಹಿತ್ತಲಿನಲ್ಲಿ ಮಳಿಗೆಗಳನ್ನು ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ.01 ನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ಅಳತೆ ನಮೂದು ಆಗಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ನಿಪಿ.01 ರಲ್ಲಿ ಚೆಕ್ಕುಬಂದಿ ಪೂರ್ವಕ್ಕೆ ಸಾರ್ವಜನಿಕ ರಸ್ತೆ, ಪಶ್ಚಿಮಕ್ಕೆ ಹೊಸಕೆರೆ ಗ್ರಾಮದ ಗಡಿ ಮತ್ತು ಹಿಸ್ರುಬ್ ಸಾಬ್ ರವರ ಜಮೀನು, ಉತ್ತರಕ್ಕೆ ಅಬ್ದುಲ್ ಸತ್ತರ್ ಸಾಬ್ ರವರ ಮನೆ ಮತ್ತು ಅವರದ್ದೇ ಆದ ಹಿತ್ತಲು ಮತ್ತು ದಕ್ಷಿಣಕ್ಕೆ ನೀರಿನ ಕಾಲುವೆ ಮತ್ತು ಹೂಹುಜಿ ರಾವ್ ರವರ ಹಿತ್ತಲು. ದಾವಾ ಷೆಡ್ಯೂಲ್ ನ ಅಳತೆಯನ್ನು ನಾವೇ ಹಾಕಿರುತ್ತೇನೆ ಎಂದು ನುಡಿಯುತ್ತಾರೆ ಸದರಿ ಆಸ್ತಿಯ ಅಳತೆಯನ್ನು ತೋರಿಸಲು ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿ . ಈ ದಾವೆಗಾಗಿ ಅಳತೆಯನ್ನು ಸೃಷ್ಟಿಮಾಡಿಕೊಂಡು ಹಾಕಿದ್ದೇವೆ ಎಂದರೆ ಸರಿ .

ದಾವಾ ಷೆಡ್ಯೂಲ್ ಆಸ್ತಿಯಲ್ಲಿ 30 x 60 ಅಳತೆಯಲ್ಲಿ ಖರೀದಿಸಿದಾಗ ಇದ್ದಂತಹ 03 ಅಂಕಣದ ಕೆಂಪು ಹಂಚಿನ ಮನೆ ಇರುತ್ತದೆ. ಮನೆ ಮತ್ತು ಹಿತ್ತಲಿಗೆ ದಾವೆಯನ್ನು ಹಾಕಿರುತ್ತೇನೆ. ಸದರಿ ದಾವೆಯನ್ನು ಹೂಡಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ ಎಂದರೆ ಸರಿ .

ವಾದ ಪತ್ರದ ಷೆಡ್ಯೂಲ್ ನಲ್ಲಿ ಅಳತೆಯನ್ನು ನಾನು ತಿದ್ದುಪಡಿ ಮಾಡಿದ್ದು ಅದರಲ್ಲಿ ಸಹಿಯನ್ನು ಮಾಡಿರುವುದಿಲ್ಲ ಸಾಕ್ಷಿ ಮುಂದುವರೆದು ಸದರಿ ತಿದ್ದುಪಡಿಯನ್ನು ದಾವೆ ಹಾಕುವ ಮೊದಲು ಮಾಡಿದ್ದು ಅಂತ ನುಡಿಯುತ್ತಾರೆ. ನಿಪಿ.05 ರಲ್ಲಿ ನಾನು ಆಸ್ತಿಯ ಅಳತೆಯ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿ. ಸದರಿ ನಿಪಿ.05 ರಲ್ಲಿ ಚೆಕ್ಕು ಬಂದಿಯನ್ನು ಸಹ ನಮೂದು ಮಾಡಿರುವುದಿಲ್ಲ ಎಂದರೆ ಸರಿ ಅಲ್ಲ. ನಿಪಿ.05 ನಾನು ಕಳುಹಿಸಿರುವ ನೋಟೀಸ್ ಗೆ ಪ್ರತಿವಾದಿಗಳಿಂದ ಪ್ರತಿ ಉತ್ತರ ಬಂದಿರುತ್ತದೆ ಎಂದರೆ ಸರಿ . ಅದು ನಿಪಿ.06 ಆಗಿರುತ್ತದೆ. ದಾವಾ ಷೆಡ್ಯೂಲ್ ನಲ್ಲಾಗಲಿ ನನ್ನ ವಾದ ಪತ್ರದ ಷೆಡ್ಯೂಲ್‌ನಲ್ಲಾಗಲಿ ಮಳಿಗೆ ಇದ್ದ ಬಗ್ಗೆ ನಮೂದು ಮಾಡಿರುವುದಿಲ್ಲ.

ಸದರಿ ದಾವಾ ಆಸ್ತಿಯಲ್ಲಿ ಎಷ್ಟು ಅಂತಸ್ತಿನ ಕಟ್ಟಡ ಇದೆ ಎಂಬ ಪ್ರಶ್ನೆಗೆ ಸಾಕ್ಷಿ ಅಲ್ಲಿ ಅಂತಸ್ತಿನ ಕಟ್ಟಡ ಇರುವುದಿಲ್ಲ ಆದರೆ ನಾನು 30 ವರುಷಗಳ ಹಿಂದೆ ತಗಡಿನ ಮಳಿಗೆಗಳನ್ನು ಕಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮಳಿಗೆಗಳ ಅಳತೆ 9 ಅಡಿ ಅಗಲ 23 ಅಡಿ ಉದ್ದ ಆ ತರಹದ 10 ಮಳಿಗೆಗಳು ಇರುತ್ತವೆ. ಸದರಿ ಮಳಿಗೆಗಳಿಗೆ ನಾನು ಲೈಸನ್ಸ್ ಪಡೆದಿರುವುದಿಲ್ಲ. ವಾದ ಪತ್ರ ಷೆಡ್ಯೂಲ್ ನಲ್ಲಿ ಎಷ್ಟು ಮಳಿಗೆಗಳು ಇವೆ ಎಂದು ಬರೆದಿಲ್ಲ ಎಂದರೆ ಸರಿ . ಸದರಿ ದಾವೆಯನ್ನು ನಾನು ಇಬ್ಬರು ಪ್ರತಿವಾದಿಗಳ ಮೇಲೆ ಹಾಕಿರುತ್ತೇನೆ. ದಿನಾಂಕಃ 19.04.2003 ರಲ್ಲಿ ಗ್ರಾಮ ಪಂಚಾಯತಿಯವರು ಆಸ್ತಿ ನಂಬರ್ 30 ಕ್ಕೆ 55 ಅಡಿ ಇದ್ದು 26 ಅಡಿ ಆಸ್ತಿಗೆ ಕಟ್ಟಡ ಕಟ್ಟಲು ಪರವಾನಗಿ ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಸೃಷ್ಟಿಸಿಕೊಂಡಿರುವ ದಾಖಲೆ ಎಂದು ನುಡಿಯುತ್ತಾರೆ. ಸದರಿ ವಿಚಾರದ ಬಗ್ಗೆ ನನಗೆ 2016 ರಲ್ಲಿ ಗೊತ್ತಾಯಿತು. ಸದರಿ ವಿಷಯದ ಬಗ್ಗೆ ನಾನು ಗ್ರಾಮ ಪಂಚಾಯತಿ ಮೇಲಾಧಿಕಾರಿಯವರಿಗೆ ಯಾವುದೇ ಮೇಲ್ಮನವಿ ಮಾಡಿಲ್ಲ. 1988-89 ನೇ ಸಾಲಿನಿಂದ 2015-16 ನೇ ಸಾಲಿನವರೆಗೂ ದಾವಾ ಆಸ್ತಿಯು 01 ನೇ ಪ್ರತಿವಾದಿಯವರ ಹೆಸರಿಗೆ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಸೃಷ್ಟಿಸಿಕೊಂಡಿರುವ ದಾಖಲೆ ಎಂದು ನುಡಿಯುತ್ತಾರೆ. ಸದರಿ ದಾಖಲೆ ಬಗ್ಗೆ ದಾವಾ ಹೂಡುವ ಕಾಲಕ್ಕೆ ನಾನು ನನ್ನ ವಕೀಲರಿಗೆ ಮಾಹಿತಿ ನೀಡಿರುವುದಿಲ್ಲ.

ದಿನಾಂಕಃ 08.03.2016 ರ ಈ ಸ್ವತ್ತಿನ ದಾಖಲೆ ಯನ್ನು ಸಹ 01 ನೇ ಪ್ರತಿವಾದಿಯವರ ಹೆಸರಿಗೆ ಇರುತ್ತದೆ ಸಾಕ್ಷಿ ಮುಂದುವರೆದು ಅದು ಸೃಷ್ಟಿಸಿಕೊಂಡಿರುವ ದಾಖಲೆ ಎಂದು ನುಡಿಯುತ್ತಾರೆ.

ಮಧುರಾಬಾಯಿ ಜಿ ಆರ್ ಎಂಬುವವರು ನಿಮಗೆ ಗೊತ್ತಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಅವರು ಗೊತ್ತು ಎಂದು ನುಡಿಯುತ್ತಾರೆ. ಅವರು ನಮ್ಮ ಪಕ್ಕದ ಮನೆಯವರು ಎನ್ನುತ್ತಾರೆ. ಪ್ರತಿವಾದಿಗಳು ಹಾಕಿರುವ ತಕರಾರಿನ ಪತ್ರದಲ್ಲಿ ಮಧುರಾಬಾಯಿಯವರು ಹೂಡಿರುವ ದಾವಾ ಸಂಖ್ಯೆಃ 78/2003 ರ ಬಗ್ಗೆ ನನಗೆ ಗೊತ್ತು.

ಪ್ರತಿವಾದಿಗಳ ಹೆಸರಿಗೆ ಇರುವ ಎಲ್ಲಾ ದಾಖಲೆಗಳ ಸಂಪೂರ್ಣ ಮಾಹಿತಿ ನನಗೆ ಇದೆ ಎಂದರೆ ಸರಿ .

ಮಂದುವರೆದ ಪಾಟೀಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(** ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.**)**

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಚನ್ನಗಿರಿ.